೧೦. ದಾವಣಗೆರೆ ನಗರದ ರಾಮಕೃಷ್ಣ ಹೆಗಡೆ ನಗರದಲ್ಲಿ ನೂರು ಗುಡಿಸಲುಗಳು ಸುಟ್ಟಿರುವುದು

ಶ್ರೀ ಪಂಪಾಪತಿ.— ದಾವಣಗೆರೆಯಲ್ಲಿ ಸುಮಾರು ಒಂದು ತಿಂಗಳ ಹಿಂದೆ ಶ್ರೀ ರಾಮಕೃಷ್ಣ ಹೆಗಡೆ ನಗರದಲ್ಲಿ ಸುಮಾರು ೧೮೦ ಗುಡಿಸಲುಗಳು ಸುಟ್ಟು ಹೋಗಿವೆ. ಅಲ್ಲಿ ವಾಸವಾಗಿದ್ದ ಜನರೆಲ್ಲರೂ ಅಲ್ಪಸಂಖ್ಯಾತರು ಅನುಸೂಚಿತವರ್ಗದವರು ಮತ್ತು ಆರ್ಥಿಕ ದುರ್ಬಲವರ್ಗದವರಾಗಿರುವುದರಿಂದ ಇವರೆಲ್ಲರಿಗೂ ನಗರಾಭಿವೃದ್ಧಿ ಮಂಡಲಿ ದಾವಣಗೆರೆ ಇವರು ನಿರ್ಮಿಸಿರುವ ಶ್ರೀ ಎಸ್. ನಿಜಲಿಂಗಪ್ಪ ನಗರದಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ ಕೊಡುವ ಸೈಟುಗಳನ್ನು ಕೊಟ್ಟಲ್ಲಿ ಸರ್ಕಾರ ಮನೆ ಕಳೆದು ಕೊಂಡ ಬಡ ಜನರಿಗೆ ಲ್ಯಾಂಡ್ ಆರ್ಮಿ ಮೂಲಕ ಮನೆಗಳನ್ನು ಕಟ್ಟಲು ಅನುಮತಿ ದೊರೆತಿರುವುದಾಗಿ ತಿಳಿದು ಬಂದಿದೆ, ಆದ್ದರಿಂದ ಈ ಬಡಜನರಿಗೆ ನಗರಾಭಿವೃದ್ಧಿ ಮಂಡಳಿಯವರಿಗೆ ಕೂಡಲೇ ತಾವು ಶಿಫಾರಸ್ ಮಾಡಿ ನಿವೇಶನಗಳನ್ನು ಪುಕ್ಕಟೆಯಾಗಿ ಕೊಡುವಂತೆ ತಾವು ಸಹಾಯ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.— ಇದಕ್ಕೆ ಇನ್ನೂ ಉತ್ತರ ಬಂದಿಲ್ಲ. ನಾಳೆ ಉತ್ತರ ಹೇಳುವುದಾಗಿ ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳಿದ್ದಾರೆ.

೧೧ ಚಿಕ್ಕನಾಯಕನ ಹಳ್ಳಿಯಲ್ಲಿ ೪೯ ಬೋರ್‌ವೆಲ್‌ಗಳನ್ನು ಹಾಕಿಸುವುದು

ಶ್ರೀ ಬಿ. ಲಕ್ಕಪ್ಪ.— ಜೀವನಾವಶ್ಯಕ ವಸ್ತುಗಳಲ್ಲಿ ಶುದ್ಧ ಕುಡಿಯುವ ನೀರೂ ಸಹ ಒಂದು. ಗ್ರಾಮಾಂತರ ಪ್ರದೇಶದ ಎಲ್ಲಾ ಗ್ರಾಮಗಳಿಗೂ ಬೋರು ಬಾವಿಯ ಮೂಲಕ ಶುದ್ಧ ನೀರನ್ನು ಕೊಡುವುದು ಸರ್ಕಾರದ ಮೊದಲ ಕರ್ತವ್ಯವಾಗಿದೆ. ಆದರೆ, ನನ್ನ ತಾಲ್ಲೂಕಿನಲ್ಲಿ ಇನ್ನೂ ೪೯ ಗ್ರಾಮಗಳಿಗೆ ಕುಡಿಯುವ ನೀರಿನ ಕೊಳವೆ ಬಾವಿಗಳಿಲ್ಲ. ಕೆಟ್ಟಿರುವ ೮೨ ಕೊಳವೆ ಬಾವಿಗಳು ಹ್ಯಾಂಡ್ ಪಂಪುಗಳ ರಿಪೇರಿಯಾಗಬೇಕಾಗಿದೆ. ಇದನ್ನು ಮಂಡಲ ಪಂಚಾಯಿತಿ, ಹಾಗೂ ಜಿಲ್ಲಾ ಪರಿಷತ್ತುಗಳ ಗಮನಕ್ಕೆ ಜನರು ಈಗಾಗಲೇ ತಂದಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳನ್ನು ಕೇಳಿದರೆ. ರಿಪೇರಿ ಮಾಡಲು ಅಗತ್ಯವಾದ ಉಪಕರಣ ಮತ್ತು ವಾಹನಗಳು ಇಲ್ಲ ಎಂದು ಒಂದೇ ಉತ್ತರ ಕೊಡುತ್ತಾರೆ. ನನ್ನ ತಾಲ್ಲೂಕಿಗೆ ಈ ವರ್ಷ ಕೇವಲ ೫ ಬೋರ್‌ವೆಲ್‌ಗಳನ್ನು ಮಾತ್ರ ಕೊಡಲಾಗಿದೆ, ಇದರಿಂದ ನಮ್ಮ ತಾಲ್ಲೂಕಿನ ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಅಸಾಧ್ಯವಾಗಿದೆ. ಆದ್ದರಿಂದ ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಗೆ ವಿಶೇಷ ಆದ್ಯತೆಯ ಮೇಲೆ ೪೯ ಬೋರ್‌ವೆಲ್‌ಗಳು, ೧ ವಾಹನ ಮತ್ತು ರಿಪೇರಿಗೆ ಅಗತ್ಯವಾದ ಉಪಕರಣಗಳನ್ನು ತಕ್ಷಣ ಒದಗಿಸಬೇಕಾಗಿ ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಇದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಂದ ಉತ್ತರವನ್ನು ಕಳುಹಿಸಿಕೊಡುತ್ತೇವೆ.

೧೨; ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಭಾಗ್ಯಜ್ಯೋತಿ ಯೋಜನೆಗೆ ವಿದ್ಯುತ್ ಒದಗಿಸದೇ ಇರುವುದು

ಶ್ರೀ ಗೋಪಾಲ ಮುಕುಂದ ಖಾನಡೆ.— ಮಾನ್ಯ ಅಧ್ಯಕ್ಷರೇ, ೧೯೮೫ನೇ ಇಸವಿಯಿಂದ ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ ಭಾಗ್ಯಜ್ಯೋತಿ ಯೋಜನೆಯ ಮೇರೆಗೆ ವಿದ್ಯುಚ್ಛಕ್ತಿ ಒದಗಿಸಲಾಗುತ್ತಿದ್ದು ಆ ಬಗ್ಗೆ ಹಣ ತುಂಬಿದೆ ಇರುವವರ ವಿದ್ಯುತ್ ಸಂಪರ್ಕವನ್ನು ಕಡಿದು ಹಾಕಲಾಗಿದ್ದು. ಅಂತಹವರಿಗೆ ಬಹಳ ತೊಂದರೆಯಾಗಿದೆ. ಈ ಸಂದರ್ಭದಲ್ಲಿ ಮೇಲ್ಕಂಡ ೨ ತಾಲ್ಲೂಕುಗಳಿಗೆ ಈ ಯೋಜನೆಯ ಮೇರೆಗೆ ಎಷ್ಟು ಜನರಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿತ್ತು ಮತ್ತು ಹಣ ತುಂಬಿದೆ ವಿದ್ಯುತ್ ಸಂಪರ್ಕ ಕಡಿದು ಹಾಕಿರುವ ಪ್ರಕರಣಗಳೆಷ್ಟು ಎಂಬುದನ್ನು ತಿಳಿಸಬೇಕಾಗಿ ಸರ್ಕಾರವನ್ನು ಆಗ್ರಹ ಪಡಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ. ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕ್‌ಗಳಲ್ಲಿ ಭಾಗ್ಯಜ್ಯೋತಿ ಯೋಜನೆಯ ಮೇರೆಗೆ ೨೯.೨.೧೯೮೮ ರ ವೇಳೆಗೆ ಸಿರ್ಸಿ ತಾಲ್ಲೂಕಿನಲ್ಲಿ ೧೫೪೪ ಕುಟುಂಬಗಳಿಗೂ ಸಿದ್ದಾಪುರ ತಾಲ್ಲೂಕ್‌ನಲ್ಲಿ ೧೩೫೬ ಕುಟುಂಬಗಳಿಗೂ ಒಂದು ವಿದ್ಯುದ್ದೀಪದ ಸೌಲಭ್ಯ ಒದಗಿಸಲಾಯಿತು.

ಭಾಗ್ಯಜ್ಯೋತಿ ಯೋಜನೆಗೆ ಹಾಲಿ ಒಬ್ಬ ಫಲಾನುಭವಿಗೆ ೪೦೦ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದ್ದು. ಇದರಲ್ಲಿ ರಾಜ್ಯ ಸರ್ಕಾರ ಶೇಕಡ ೨೦ರಷ್ಟನ್ನು ಸಹಾಯಧನವನ್ನಾಗಿ ನೀಡುತ್ತದೆ. ಉಳಿದ ಹಣವನ್ನು ಫಲಾನುಭವಿಗಳು ೧೫ ವರ್ಷಗಳ ಅವಧಿಯಲ್ಲಿ ಡಿಫರೆನ್ಷಿಯಲ್ ಬಡ್ಡಿ ದರದಲ್ಲಿ ಮಾಹೆಯಾನ ಕಂತುಗಳಲ್ಲಿ ಮಾಹೆಯಾನ ವಿದ್ಯುತ್ ಬಳಕೆ ಹಣದ ಜೊತೆ ಪಾವತಿ ಮಾಡಬೇಕು. ಹಾಲಿ ದರದಲ್ಲಿ ಒಬ್ಬ ಫಲಾನುಭವಿಯು ಮಂಡಳಿಗೆ ಮಾಹೆಯಾನ ರೂ. ೨-೬೦ನ್ನು ಅಸಲು ಮತ್ತು ಬಡ್ಡಿ ಬಾಬ್ತು ರೂಪಾಯಿ ೨-೮೦ ನ್ನು ಮಾಹೆಯಾನ ವಿದ್ಯುತ್ ಬಳಕೆಯ ಬಾಬ್ತು ಅಂದರೆ ಒಟ್ಟು ರೂ. ೫-೧೦ನ್ನು ಮಂಡಳಿಗೆ ಪಾವತಿ ಮಾಡಬೇಕು.

ಭಾಗ್ಯಜ್ಯೋತಿ ಫಲಾನುಭವಿಗಳ ಸ್ಥಾವರಗಳಿಗೆ ವಿದ್ಯುತ್ ಮಾಪಕ ಅಳವಡಿಸುವುದಿಲ್ಲ, ಇವರು ಹಣ ಕಟ್ಟದಿದ್ದರೂ ವಿದ್ಯುತ್ ಸರಬರಾಜು ನಿಲ್ಲಿಸುತ್ತಿರಲಿಲ್ಲ. ಇಷ್ಟೊಂದು ರಿಯಾಯಿತಿ, ಅನುಕೂಲ ಗಳನ್ನು ಕೊಟ್ಟಿದ್ದರೂ ಬಹುತೇಕ ಫಲಾನುಭವಿಗಳು ಮೇಲ್ಕಂಡ ಹಣವನ್ನು ಮಂಡಳಿಗೆ ಪಾವತಿ ಮಾಡದೇ ಬಾಕಿ ಹಣ ಬೆಳೆಯುತ್ತಾ ಹೋಯಿತು. ಇದರಿಂದಾಗಿ ಹಣ ಕೊಡದವರಿಗೆ ವಿದ್ಯುತ್ ಸರಬರಾಜು ನಿಲ್ಲಿಸುವ ಕ್ರಮ ಕೈಗೊಳ್ಳಲಾಯಿತು. ಆದರೆ ಈ ಫಲಾನುಭವಿಗಳು ಬಡವರಾದುದರಿಂದ ಎಲ್ಲಾ ಬಾಕಿಯನ್ನೂ ಒಂದೇ ಕಂತಿನಲ್ಲಿ ಕೊಡುವುದು ಕಷ್ಟವಾಗುವುದರಿಂದ ಅವರುಗಳು ಸುಲಭ ಕಂತುಗಳಲ್ಲಿ ಎಂದರೆ ಮಾಹೆಯಾನ ೧೦ ರೂಪಾಯಿಗಳಿಗೆ ಕಡಿಮೆಯಿಲ್ಲದ ಕಂತುಗಳಲ್ಲಿ ಬಡ್ಡಿ ಸಹಿತ ಪಾವತಿ ಮಾಡಲು ಅವಕಾಶ ಮಾಡಿಕೊಡಲಾಯಿತು. ಹಣ ಪಾವತಿ ಮಾಡದೇ ಡಿಸ್‌ಕನ್‌ಕ್ಷನ್ ಆದ ಸ್ಥಾವರಗಳ ಬಗ್ಗೆ ತಕ್ಷಣ ಮಾಹಿತಿ ಇಲ್ಲ. ಅದನ್ನು ತರಿಸಿಕೊಡಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ.—ಇದರ ಬಗ್ಗೆ ಒಂದು ಸರ್ಕ್ಯುಲರ್ ಕಳುಹಿಸಿಕೊಡಿ. ಎಲ್ಲರಿಗೂ ಅನುಕೂಲವಾಗುತ್ತದೆ.

13. ತರೀಕೆರೆ ತಾಲ್ಲೂಕು ಮತ್ತಿತರ ಕಡೆಗಳಲ್ಲಿ ಸತತವಾಗಿ ದರೋಡೆಗಳು ನಡೆಯುತ್ತಿರುವುದು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ. ತರೀಕೆರೆ ತಾಲ್ಲೂಕು ಮತ್ತು ತರೀಕೆರೆ ಪಟ್ಟಣದಲ್ಲಿ ದಿನಾಂಕ ೨೦-೩-೧೯೮೮ ರಿಂದ ಸತತವಾಗಿ ೩ ದಿವಸ ದರೋಡೆ ಮತ್ತು ಕಳ್ಳತನ ಆಗುತ್ತಿರುವುದರಿಂದ ಜನರಿಗೆ ಭೀತಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಭೀತಿಯನ್ನು ಹೋಗಲಾಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದನ್ನು ಈ ಸದನದಲ್ಲಿ ತಿಳಿಸಬೇಕು. ಎಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ. .....

ಮಾನ್ಯ ಸದಸ್ಯರು ಸೂಚಿಸಿರುವಂತೆ ೨೦-೩-೮೮ ರಂದು ತರೀಕೆರೆಯಲ್ಲಾಗಲೀ ಅಥವಾ ತರೀಕೆರೆ ತಾಲ್ಲೂಕಿನ ಇನ್ನಾವುದೇ ಭಾಗದಲ್ಲಾಗಲೀ ಸತತವಾಗಿ ಮೂರು ದರೋಡೆ ಪ್ರಕರಣಗಳು ಆಗಿವೆ ಎಂಬುದು ಸರಿಯಲ್ಲ.

ತರೀಕೆರೆ ನಗರದಲ್ಲಿ ಇತ್ತೀಚೆಗೆ ಎರಡು ಮನೆಗಳ್ಳತನದ ಪ್ರಕರಣಗಳು ವರದಿಯಾಗಿದ್ದು ಅವುಗಳ ವಿವರ ಈ ಕೆಳಕಂಡಂತಿದೆ,—

(೧) ಇದೇ ತಿಂಗಳು ೧೪ ಮತ್ತು ೧೫ ನೇ ತಾರೀಖಿನ ಮಧ್ಯರಾತ್ರಿಯಲ್ಲಿ ಕೆ. ಇ. ಬಿ. ನೌಕರರಾದ ಪುಟ್ಟಚಾರಿ ಎಂಬುವರ ಮನೆಗೆ ದುಷ್ಕರ್ಮಿಗಳು ಹಿಂದಿನ ಬಾಗಿಲಿನ ಚಿಲಕವನ್ನು ತೆಗೆದು ಮನೆಗೆ ಪ್ರವೇಶಿಸಿ ಮಲಗಿದ್ದ ಶ್ರೀ ಪುಟ್ಟಚಾರಿಯವರ ಪತ್ನಿಯವರ ಕತ್ತಿನಲ್ಲಿದ್ದ ಸುಮಾರು ರೂ. ೩೧೦೦-೦೦ ಮೌಲ್ಯದ ಮಂಗಳ ಸೂತ್ರವನ್ನು ಅಪಹರಿಸಿಕೊಂಡು ಹೋಗಿರುತ್ತಾರೆ. ಶ್ರೀ ಪುಟ್ಟಚಾರಿಯವರು ಎಚ್ಚರಗೊಂಡು ಕೂಗಿದಾಗ ದುಷ್ಕರ್ಮಿಗಳು ಓಡಿಹೋದರು ಅವರು ಇಬ್ಬರಿದ್ದರೆಂದು ಹೇಳಲಾಗಿದೆ.